12.07.2019 ಶುಕ್ರವಾರ | ಬೆಂಗಳೂರು

# ಆಟಅಂಗಳ

❛ ಕ್ರೀಡೆಯಲ್ಲಿ ನಾನು ಕೆಳಗೆ ಬಿದ್ದಾಗ ಮೇಲೇಳುವುದು ಕಷ್ಟ. ಆದರೂ, ಪ್ರಯತ್ನ ನಿಲ್ಲಿಸಿಲ್ಲ. ನನಗೆ ಬೆಂಬಲವಾಗಿ ನಿಂತಿದ್ದ ಪ್ರತಿಯೊಬ್ಬ ಅಭಿಮಾನಿಗೂ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಸಾಲದು. ನಿಮ್ಮ ಸಹಕಾರಕ್ಕೆ ನಾನು ಚಿರಋಣಿ. ಕೊನೆಯ ಉಸಿರು ಇರುವವರೆಗೂ ನನ್ನ ಕಡೆಯಿಂದ ಸಾಧ್ಯವಾದಷ್ಟು ಉತ್ತಮವಾದದನ್ನು ತಂಡಕ್ಕೆ ನೀಡುತ್ತೇನೆ.
-**ರವೀಂದ್ರ ಜಡೇಜಾ**, ಭಾರತ ತಂಡದ ಆಟಗಾರ



❛ ಭಾರತ ತಂಡದ ಯುವ ವಿಕೆಟ್ ಕೀಪರ್ ಹಾಗೂ ಬ್ಯಾಟ್ಸ್‌ಮನ್ ರಿಷಭ್ ಪಂತ್ ಅವರು ಕೇವಲ 8 ಏಕದಿನ ಪಂದ್ಯ ಆಡಿದ್ದಾರೆ. ಇದು ಅವರ ತಪ್ಪು ಅಲ್ಲ. ಅವರು ಅನುಭವದಿಂದ ಇವುಗಳನ್ನು ಸುಧಾರಿಸಿಕೊಳ್ಳುತ್ತಾರೆ. ಇವರ ಪ್ರದರ್ಶನ ನಿರಾಶಾದಾಯಕ ಅಲ್ಲ. ಆದಾಗ್ಯೂ, ಎಲ್ಲರು ತಮ್ಮ ಅನಿಸಿಕೆ ವ್ಯಕ್ತಪಡಿಸಬಹುದು.
-**ಯುವರಾಜ ಸಿಂಗ್**, ಭಾರತ ತಂಡದ ಮಾಜಿ ಆಟಗಾರ



**ಸಮಾಚಾರ ಸಣ್ಣದಲ್ಲ**

## ಆಫ್ಘನ್ ವೇಗಿಗೆ ಒಂದು ವರ್ಷ ಬ್ಯಾನ್



**ಕಾಬೂಲ್:** ಇಂಗ್ಲೆಂಡ್ ಹಾಗೂ ವೇಲ್ಸ್ ಆತಿಥ್ಯದಲ್ಲಿ ನಡೆಯುತ್ತಿರುವ ಐಸಿಸಿ ವಿಶ್ವಕಪ್ ವೇಳೆ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದ ಅಫ್ಘಾನಿಸ್ತಾನ ಕ್ರಿಕೆಟ್ ತಂಡದ ವೇಗಿ ಅಫ್ತಾಬ್ ಅಲಾಮ್ ಅವರನ್ನು ಒಂದು ದೇಶೀಯ ಹಾಗೂ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ಅಮಾನತುಗೊಳಿಸಲಾಗಿದೆ.

ಈ ಕುರಿತು ತನಿಖಾ ವರದಿ ಪರಿಶೀಲಿಸಿದ ಆಫ್ಘನ್ ವೇಗಿ ತಪ್ಪು ಮಾಡಿರುವುದು ಸಾಭೀತಾಗಿದೆ. ಕಳೆದ ವಾರ ಕಾಬೂಲ್‌ನಲ್ಲಿ ನಡೆದಿದ್ದ ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿಯ ಶಿಸ್ತು ಸಮಿತಿ ಸಭೆಯಲ್ಲಿ ಅಲಾಮ್ ಅವರಿಗೆ ಒಂದು ನಿಷೇಧ ಹೇರುವ ಕುರಿತು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಇಎಸ್‌ಪಿಎನ್ ವರದಿ ತಿಳಿಸಿದೆ. ವಿಶ್ವಕಪ್ ಟೂರ್ನಿಯ ಜೂನ್ 22 ರಂದು ಅಫ್ಘಾನಿಸ್ತಾನ ತಂಡ 11 ರನ್‌ಗಳಿಂದ ಸೋಲು ಅನುಭವಿಸಿತ್ತು. ಈ ವೇಳೆ ಸೌಥ್‌ಹ್ಯಾಮ್ಟನ್‌ನ ಹೋಟೆಲ್‌ನಲ್ಲಿ ಮಹಿಳಾ ಅತಿಥಿಯೊಬ್ಬರ ಬಳಿ ಅಫ್ತಾಬ್ ಅಲಾಮ್ ಅಸಭ್ಯವಾಗಿ ವರ್ತಿಸಿದ್ದರು. ಹಾಗಾಗಿ, ಅಲಾಮ್ ಅವರನ್ನು ಇನ್ನುಳಿದ ಪಂದ್ಯಗಳಿಗೆ ಆಡದಂತೆ ತಂಡದಿಂದ ಕೈ ಬಿಡಲಾಗಿತ್ತು.

## ಭಾರತೀಯರ ಬೆಂಬಲ ಕೇಳಿದ ವಿಲಿಯಮ್ಸನ್



**ಮ್ಯಾಂಚೆಸ್ಟರ್:** ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವನ್ನು 18 ರನ್‌ಗಳಿಂದ ನ್ಯೂಜಿಲೆಂಡ್ ಸೋಲಿಸಿದ ಬಳಿಕ ಭಾರತೀಯ ಅಭಿಮಾನಿಗಳು ಐಸಿಸಿ ವಿಶ್ವಕಪ್ ಫೈನಲ್ ಪಂದ್ಯಕ್ಕೆ ನಮಗೆ ಬೆಂಬಲ ನೀಡಲಿದ್ದಾರೆಂಬ ನಂಬಿಕೆ ಇದೆ ಎಂದು ನಾಯಕ ಕೇನ್ ವಿಲಿಯಮ್ಸನ್ ವಿಶ್ವಾಸ ವ್ಯಕ್ತಪಡಿಸಿದರು. ಬುಧವಾರ ಇಲ್ಲಿನ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿತು. ಹಾಗಾಗಿ, ಕಿವೀಸ್ ಅಂತಿಮವಾಗಿ 18 ರನ್‌ಗಳಿಂದ ಜಯ ಸಾಧಿಸಿತು. ಆ ಮೂಲಕ ಸತತ ಎರಡನೇ ಬಾರಿ ಫೈನಲ್‌ಗೆ ಲಗ್ಗೆ ಇಟ್ಟಿದೆ. ವಿರಾಟ್ ಕೊಹ್ಲಿ ಪಡೆಯ ರೀತಿ ನಾವು ಕೂಡ ದೇಶವನ್ನು ಪ್ರತಿನಿಧಿಸುತ್ತಿದ್ದೇವೆ. ಸೋಲು-ಗೆಲುವು ಕ್ರೀಡೆಯ ಒಂದು ಭಾಗ. ಕ್ರೀಡಾ ಸ್ಫೂರ್ತಿಯಿಂದ ನಾವು ಆಡಬೇಕಾಗುತ್ತದೆ. ಹಾಗಾಗಿ, ಭಾರತೀಯ ಅಭಿಮಾನಿಗಳು ಕೋಪಗೊಳಗಾಗುವುದಿಲ್ಲ ಎಂದು ಭಾವಿಸಿದ್ದೇನೆ ಎಂದು ಪಂದ್ಯದ ಬಳಿಕ ಸುದ್ದಿಗೋಷ್ಠಿಯಲ್ಲಿ ಹೇಳಿದರು. ನಮ್ಮ ದೇಶದ ಅಭಿಮಾನಿಗಳ ಜತೆಗೆ, 1.5 ಶತಕೋಟಿ ಜನತೆ ನಮಗೆ ಬೆಂಬಲ ಸೂಚಿಸಲಿದ್ದಾರೆಂಬ ವಿಶ್ವಾಸ ನನಗಿದೆ. ಏಕದಿನ ಹಾಗೂ ಟಿ-20 ಕ್ರಿಕೆಟ್ ಯಾವಾಗಲೂ ಚಂಚಲತೆಯಿಂದ ಕೂಡಿರುತ್ತದೆ. ಹಾಗಾಗಿ, ಸೋಲು-ಗೆಲುವುಗಳನ್ನು ಸಮಾನ ಮನಸ್ಸಿನಿಂದ ಒಪ್ಪಿಕೊಳ್ಳಬೇಕು ಎಂದು ಹೇಳಿದರು.

### ಆಂಗ್ಲರಿಗೆ 8 ವಿಕೆಟ್ ಜಯ | ರಾಯ್ ಸ್ಫೋಟಕ ಅರ್ಧ ಶತಕ | ವೋಕ್ಸ್ ಮಿಂಚಿನ ದಾಳಿ | ಆಸ್ಟ್ರೇಲಿಯಾ ಬ್ಯಾಟಿಂಗ್ ವೈಫಲ್ಯ

# ಇಂಗ್ಲೆಂಡ್ ಪಾಲಿಗೆ ಫೈನಲ್ ಟಿಕೆಟ್

**ಬರ್ಮಿಂಗ್‌ಹ್ಯಾಮ್:** ಮೂರು ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನ ತೋರಿದ ಇಂಗ್ಲೆಂಡ್ ಐಸಿಸಿ ವಿಶ್ವಕಪ್ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿತು. ಇದರೊಂದಿಗೆ ವಿಶ್ವಕಪ್ ಇತಿಹಾಸದಲ್ಲಿ ಇಂಗ್ಲೆಂಡ್ ನಾಲ್ಕನೇ ಬಾರಿ ಫೈನಲ್ ತಲುಪಿತು.

ಇಲ್ಲಿನ ಎಜ್ ಬಾಸ್ಟನ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ 49 ಓವರ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡು 223 ರನ್ ದಾಖಲಿಸಿತ್ತು. ಬಳಿಕ, ಸಾಧಾರಣ ಮೊತ್ತದ ಗುರಿ ಹಿಂಬಾಲಿಸಿದ ಆಂಗ್ಲರು, 32.1 ಓವರ್‌ಗಳಲ್ಲಿ ಎರಡು ವಿಕೆಟ್ ಕಳೆದುಕೊಂಡು 226 ರನ್ ಗಳಿಸಿ ಗೆಲುವಿನ ನಗೆ ಬೀರಿತು.

**ರಾಯ್-ಬೈರ್‌ಸ್ಟೋ ಬೊಂಬಾಟ್:** ಸಾಧಾರಣ ಗುರಿ ಬೆನ್ನತ್ತಿದ ಆತಿಥೇಯ ಇಂಗ್ಲೆಂಡ್ ಹಾದಿ ಸುಲಭವಾಗಿತ್ತು. ಆರಂಭಿಕರಾಗಿ ಕಣಕ್ಕೆ ಇಳಿದ ಜೇಸನ್ ರಾಯ್ ಹಾಗೂ ಜಾನಿ ಬೈರ್‌ಸ್ಟೋ ಜೋಡಿ ಆರಂಭದಿಂದಲೂ ಆಸೀಸ್ ಬೌಲರ್‌ಗಳ ಮೇಲೆ ಸವಾರಿ ಮಾಡಿತು. ಟಿ-20 ಮಾದರಿ ರೀತಿ ಬ್ಯಾಟಿಂಗ್ ಮಾಡಿದ ಈ ಜೋಡಿ ಮುರಿಯದ ಮೊದಲೇ ವಿಕೆಟ್‌ಗೆ 124 ರನ್ ಗಳಿಸಿ ತಂಡಕ್ಕೆ ಅತ್ಯುತ್ತಮ ಅಡಿಪಾಯ ಹಾಕಿತು. 34 ರನ್ ಗಳಿಸಿ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದ ಜಾನಿ ಬೈರ್‌ಸ್ಟೋ ಅವರು, ಸ್ಟಾರ್ಕ್ ಎಸೆತದಲ್ಲಿ ಎಲ್‌ಬಿಡಬ್ಲ್ಯುಗೆ ಬಲಿಯಾದರು.

ಆರಂಭದಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಜೇಸನ್ ರಾಯ್ ಆಸೀಸ್ ಬೌಲರ್‌ಗಳನ್ನು ಮನಬಂದಂತೆ ಥಳಿಸಿದರು. ಎದುರಿಸಿದ 65 ಎಸೆತಗಳಲ್ಲಿ ಐದು ಸಿಕ್ಸರ್ ಹಾಗೂ ಒಂಬತ್ತು ಬೌಂಡರಿಯೊಂದಿಗೆ ಒಟ್ಟು 85 ರನ್ ಗಳಿಸಿದರು. ಶತಕ ದಂಚಿನಲ್ಲಿದ್ದ ಅವರು ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಔಟ್ ಅಲ್ಲದೇ ಇದ್ದರೂ ತೀರ್ಪುಗಾರರ ತಪ್ಪಿನಿಂದ ಅಸಮಾಧಾನದಿಂದ ಪೆವಿಲಿಯನ್‌ಗೆ ಹೆಜ್ಜೆ ಹಾಕಿದರು.





ಆಸ್ಟ್ರೇಲಿಯಾ ಪರ ಅರ್ಧ ಶತಕ ಸಿಡಿಸಿ ತಂಡಕ್ಕೆ ಆಸರೆಯಾದ ಸ್ಟೀವ್ ಸ್ಮಿತ್.

ನಂತರ ಮೂರನೇ ವಿಕೆಟ್‌ಗೆ ಜತೆಯಾದ ನಾಯಕ ಇಯಾನ್ ಮಾರ್ಗನ್ ಹಾಗೂ ಜೋ ರೂಟ್ ಜೋಡಿ 79 ರನ್ ಜತೆಯಾಟವಾಡುವ ಮೂಲಕ ಇಂಗ್ಲೆಂಡ್ ತಂಡವನ್ನು ಇನ್ನೂ 17.5 ಓವರ್ ಬಾಕಿ ಇರುವಂತೆ ದಡ ಸೇರಿಸಿತು. ಅದ್ಭುತ ಲಯದಲ್ಲಿರುವ ಜೋ ರೂಟ್ 46 ಎಸೆತಗಳಲ್ಲಿ 49 ರನ್ ಗಳಿಸಿದರೆ, ಇಯಾನ್ ಮಾರ್ಗನ್ 39 ಎಸೆತಗಳಲ್ಲಿ 45 ರನ್ ಗಳಿಸಿ ಅಜೇಯರಾಗಿ ಉಳಿದರು. ಭಾನುವಾರ ನ್ಯೂಜಿಲೆಂಡ್ ವಿರುದ್ಧ ಲಾರ್ಡ್ಸ್ ಕ್ರೀಡಾಂಗಣದಲ್ಲಿ ಫೈನಲ್ ಕಾದಾಟದಲ್ಲಿ ಇಂಗ್ಲೆಂಡ್ ಸೆಣಸಲಿದೆ.

ಇದಕ್ಕೂ ಮುನ್ನ ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ ತಂಡಕ್ಕೆ ವೇಗಿ ಕ್ರಿಸ್ ವೋಕ್ಸ್ ಆಘಾತ ನೀಡಿದರು. ಡೇವಿಡ್ ವಾರ್ನರ್ (9) ಹಾಗೂ ಪೀಟರ್ ಹ್ಯಾಂಡ್ಸ್‌ಕೊಂಬ್ (4) ಅವರಿಗೆ ವೋಕ್ಸ್ ಪೆವಿಲಿಯನ್ ದಾರಿ ತೋರಿಸಿದರು. ಜೋಫ್ರಾ ಆರ್ಚರ್ ಅವರು ಆ್ಯರೋನ್ ಫಿಂಚ್ ಶೂನ್ಯಕ್ಕೆ ಕಟ್ಟಿ ಹಾಕಿದರು.

**ಆಸೀಸ್‌ಗೆ ಚೇತರಿಕೆ ನೀಡಿದ ಸ್ಮಿತ್-ಕೇರಿ:** ಆರಂಭದಲ್ಲೇ ಮೂರು ವಿಕೆಟ್ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಹಾಲಿ ಚಾಂಪಿಯನ್‌ಗೆ ಸ್ಟೀವ್ ಸ್ಮಿತ್ ಹಾಗೂ ಅಲೆಕ್ಸ್ ಕೇರಿ ಜೋಡಿ ಆಸರೆಯಾಯಿತು. ಈ ಜೋಡಿ ಇಂಗ್ಲೆಂಡ್ ಬೌಲರ್‌ಗಳನು ಸಮರ್ಥವಾಗಿ ಎದುರಿಸಿತು. 27.2 ಓವರ್‌ಗಳವರೆಗೂ ವಿಕೆಟ್ ಉರುಳದಂತೆ ತಡೆದ ಈ ಜೋಡಿಯು ಮುರಿಯದ ನಾಲ್ಕನೇ ವಿಕೆಟ್‌ಗೆ 103 ರನ್ ಗಳಿಸಿ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿತು.

### ಸಂಕ್ಷಿಪ್ತ ಸ್ಕೋರ್

| ಆಸ್ಟ್ರೇಲಿಯಾ 223 (49) | |
|---|---|
| ಸ್ಟೀವ್ ಸ್ಮಿತ್ | 85 |
| ಅಲೆಕ್ಸ್ ಕೇರಿ | 46 |
| ಮಿಚೆಲ್ ಸ್ಟಾರ್ಕ್ | 29 |
| ಗ್ಲೆನ್ ಮ್ಯಾಕ್ಸ್‌ವೆಲ್ | 22 |
| **ಬೌಲಿಂಗ್** | |
| ಕ್ರಿಸ್ ವೋಕ್ಸ್ | 20ಕ್ಕೆ 3 |
| ಆದಿಲ್ ರಶೀದ್ | 54ಕ್ಕೆ 3 |
| ಜೊಫ್ರಾ ಆರ್ಚರ್ | 32ಕ್ಕೆ 2 |
| ಮಾರ್ಕ್‌ವುಡ್ | 45ಕ್ಕೆ 1 |
| **ಇಂಗ್ಲೆಂಡ್ 226/2 (32.1)** | |
| ಜೇಸನ್ ರಾಯ್ | 85 |
| ಜೋ ರೂಟ್ | 49* |
| ಇಯಾನ್ ಮಾರ್ಗನ್ | 45* |
| **ಬೌಲಿಂಗ್** | |
| ಮಿಚೆಲ್ ಸ್ಟಾರ್ಕ್ | 70ಕ್ಕೆ 1 |
| ಪ್ಯಾಟ್ ಕಮಿನ್ಸ್ | 34ಕ್ಕೆ 1 |

## ರಕ್ತ ಸುರಿಸಿ ತಂಡಕ್ಕೆ ಆಸರೆಯಾದ ಕೇರಿ



ಇಂಗ್ಲೆಂಡ್ ವಿರುದ್ಧ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಜೊಫ್ರಾ ಆರ್ಚರ್ ಎಸೆತದಲ್ಲಿ ಗಲ್ಲಕ್ಕೆ ಚೆಂಡು ತಾಗಿಸಿಕೊಂಡ ಆಸ್ಟ್ರೇಲಿಯಾ ತಂಡದ ವಿಕೆಟ್ ಕೀಪರ್ ಅಲೆಕ್ಸ್ ಕೇರಿ ಅವರು ಮೈದಾನದಲ್ಲೇ ವೈದ್ಯರಿಂದ ಚಿಕಿತ್ಸೆ ಪಡೆದ ಘಟನೆ ಗುರುವಾರ ನಡೆಯಿತು. ಎಂಟನೇ ಓವರ್‌ನಲ್ಲಿ ಇಂಗ್ಲೆಂಡ್‌ನ ಜೊಫ್ರಾ ಆರ್ಚರ್ ಅವರ ಶಾರ್ಟ್ ಎಸೆತದಲ್ಲಿ ಚೆಂಡು ಅಲೆಕ್ಸ್ ಕೇರಿ ಅವರ ಗಲ್ಲಕ್ಕೆ ಬಡಿಯಿತು. ಈ ವೇಳೆ ರಕ್ತ ಸುರಿಯಿತು. ಈ ವೇಳೆ ವೈದ್ಯರು ಅಂಗಳಕ್ಕೆ ಆಗಮಿಸಿ ಕೇರಿ ಅವರಿಗೆ ಚಿಕಿತ್ಸೆ ನೀಡಿ ತಲೆಗೆ ಬ್ಯಾಡೇಜ್ ಕಟ್ಟಿದರು. ಇದರ ನಡುವೆಯೂ ಅವರು ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. 70 ಎಸೆತಗಳಲ್ಲಿ 46 ರನ್ ಗಳಿಸಿ ತಂಡಕ್ಕೆ ಆಸರೆಯಾದರು.

## ಮೆಕ್‌ಗ್ರಾಥ್ ದಾಖಲೆ ಮುರಿದ ಸ್ಟಾರ್ಕ್



ಇಂಗ್ಲೆಂಡ್ ವಿರುದ್ಧ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್ ವಿಶ್ವ ದಾಖಲೆ ಮಾಡಿದರು. 18 ಓವರ್‌ನಲ್ಲಿ ಜಾನಿ ಬೈರ್ ಸ್ಟೋ ಅವರ ವಿಕೆಟ್ ಪಡೆಯುವ ಮೂಲಕ ಪ್ರಕಸ್ತ ಆವೃತ್ತಿಯಲ್ಲಿ ಒಟ್ಟು 27 ವಿಕೆಟ್ ತನ್ನ ಖಾತೆಗೆ ಸೇರಿಸಿಕೊಂಡರು. ಆ ಮೂಲಕ ತನ್ನದೇ ದೇಶದವರಾದ ಮೆಕ್‌ಗ್ರಾಥ್(26 ವಿಕೆಟ್) ಅವರ ದಾಖಲೆ ಮುರಿದರು.

| ಬೌಲರ್ | ವಿಕೆಟ್ | ವರ್ಷ |
|---|---|---|
| ಮಿಚೆಲ್ ಸ್ಟಾರ್ಕ್ | 27 | 2019 |
| ಮೆಕ್‌ಗ್ರಾಥ್ | 26 | 2007 |
| ಚಮಿಂಡಾ ವಾಸ್ | 23 | 2003 |
| ಶಾನ್ ಟೈಟ್ | 23 | 2007 |
| ಎಂ. ಮುರಳಿಧರನ್ | 23 | 2007 |

### ಮುಖ್ಯಾಂಶಗಳು

- ಇಂಗ್ಲೆಂಡ್‌ಗೆ ಆಸ್ಟ್ರೇಲಿಯಾ ವಿರುದ್ಧ ಎಂಟು ವಿಕೆಟ್‌ಗಳ ಜಯ
- 27 ವರ್ಷಗಳ ಬಳಿಕ ಇದೇ ಮೊದಲ ಬಾರಿ ಆತಿಥೇಯ ಇಂಗ್ಲೆಂಡ್ ವಿಶ್ವಕಪ್ ಫೈನಲ್ ತಲುಪಿದೆ.
- ಆಸ್ಟ್ರೇಲಿಯಾ ಪರ ಸ್ಟೀವ್ ಸ್ಮಿತ್(85) ಏಕಾಂಗಿ ಹೋರಾಟ ವ್ಯರ್ಥ.
- ಮೂರು ವಿಕೆಟ್ ಕಿತ್ತು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದ ಕ್ರಿಸ್ ವೋಕ್ಸ್
- ಅಂಪೈರ್ ತಪ್ಪು ತೀರ್ಪಿನಿಂದ ಔಟ್ ಆಗಿ ಅಸಮಾಧಾನದಿಂದ ಪೆವಿಲಿಯನ್‌ಗೆ ಹೆಜ್ಜೆ ಹಾಕಿದ ಜೇಸನ್ ರಾಯ್
- ಭಾನುವಾರ ಲಾರ್ಡ್ಸ್ ಅಂಗಳದಲ್ಲಿ ಇಂಗ್ಲೆಂಡ್ ಹಾಗೂ ನ್ಯೂಜಿಲೆಂಡ್ ನಡುವೆ ಚೊಚ್ಚಲ ವಿಶ್ವಕಪ್‌ಗೆ ಕಾದಾಟ

ಸ್ಟೀವ್ ಸ್ಮಿತ್ ಜತೆ ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತ ವಿಕೆಟ್ ಕೀಪರ್ ಅಲೆಕ್ಸ್ ಕೇರಿ ತಾಳ್ಮೆಯ ಬ್ಯಾಟಿಂಗ್ ಮಾಡಿ 70 ಎಸೆತಗಳಲ್ಲಿ 46 ರನ್ ಗಳಿಸಿದರು. ಅರ್ಧ ಶತಕದಂಚಿನಲ್ಲಿ ಆದೀಲ್ ರಶೀದ್ ಎಸೆತದಲ್ಲಿ ಜೇಮ್ಸ್ ವಿನ್ಸ್‌ಗೆ ಕ್ಯಾಚ್ ನೀಡಿದರು.

**ಫಲನೀಡದ ಸ್ಮಿತ್ ಏಕಾಂಗಿ ಹೋರಾಟ:** ಆರಂಭದಿಂದಲೂ ವಿಕೆಟ್ ಉರುಳುತ್ತಿದ್ದರೂ ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತ ಸ್ಟೀವ್ ಸ್ಮಿತ್ ಆಸ್ಟ್ರೇಲಿಯಾ ತಂಡಕ್ಕೆ ಆಪತ್ಬಾಂದವರಾದರು. ಇಂಗ್ಲೆಂಡ್ ಬೌಲರ್‌ಗಳ ಮಾರಕ ದಾಳಿಯನ್ನು ಬಹಳ ಎಚ್ಚರಿಕೆಯಿಂದ ಎದುರಿಸಿದರು. ಯಾವುದೇ ಕೆಟ್ಟ ಹೊಡೆತಗಳಿಗೆ ಕೈ ಹಾಕದ ಅವರು ಸಮಯಕ್ಕೆ ತಕ್ಕಂತೆ ಬ್ಯಾಟಿಂಗ್ ಮಾಡಿದರು. 119 ಎಸೆತಗಳನ್ನು ಎದುರಿಸಿದ ಅವರು ಆರು ಬೌಂಡರಿಯೊಂದಿಗೆ 85 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸುವಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದರು. ಆದರೂ, ಅಂತಿಮವಾಗಿ ಸೋಲು ಅನುಭವಿಸಿ ಟೂರ್ನಿಯಿಂದ ಹೊರ ನಡೆಯಬೇಕಾಗಿತ್ತು. ಇಂಗ್ಲೆಂಡ್ ಪರ ಕ್ರಿಸ್ ವೋಕ್ಸ್ ಹಾಗೂ ಆದಿಲ್ ರಶೀದ್ ತಲಾ ಮೂರು ವಿಕೆಟ್ ಪಡೆದರು. ಜೊಫ್ರಾ ಆರ್ಚರ್ ಎರಡು ವಿಕೆಟ್ ಪಡೆದರು.

## ಫಿಜಿಯೋ ಫರ್ಹಾತ್ ಸೇವೆ ಅಂತ್ಯ



**ಮ್ಯಾಂಚೆಸ್ಟರ್:** ಭಾರತ ತಂಡದ ಫಿಜಿಯೋಥೆರಪಿಸ್ಟ್ ಪ್ಯಾಟ್ರಿಕ್ ಫರ್ಹಾತ್ ಅವರ ಸೇವೆ ನ್ಯೂಜಿಲೆಂಡ್ ವಿರುದ್ಧ ಟೀಮ್ ಇಂಡಿಯಾ 18 ರನ್‌ಗಳ ಸೋಲಿನ ಬಳಿಕ ಮುಕ್ತಾಯವಾಯಿತು.

ಭಾರತ ಕ್ರಿಕೆಟ್ ತಂಡಕ್ಕೆ ಶುಭವಾಗಲಿ. ಭಾರತ ತಂಡದಲ್ಲಿ ಫಿಜಿಯೋಥೆರಪಿಸ್ಟ್ ಆಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ ಬಿಸಿಸಿಐಗೆ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ ಎಂದು ಅವರು ಟ್ವೀಟ್ ಮಾಡಿದ್ದಾರೆ. ಭಾರತ ತಂಡ ಐಸಿಸಿ ವಿಶ್ವಕಪ್ ಜಯಿಸಲಿದೆ ಎಂದು ಭಾರಿ ನಿರೀಕ್ಷೆ ಇಟ್ಟಿದ್ದೆ. ಆದರೆ, ಅದು ಸಾಕಾರವಾಗಲಿಲ್ಲ. ಕಳೆದ ನಾಲ್ಕು ವರ್ಷಗಳ ಕಾಲ ತಂಡದಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ಬಿಸಿಸಿಐಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಟೀಮ್ ಇಂಡಿಯಾ ಆಟಗಾರರು ಹಾಗೂ ಸಿಬ್ಬಂದಿ ಭವಿಷ್ಯ ಉತ್ತಮವಾಗಿರಲಿ ಎಂದು ಫರ್ಹಾತ್ ಟ್ವೀಟ್ ಮಾಡಿದ್ದಾರೆ. ಮೂವತ್ತು ವರ್ಷಗಳ ವೃತ್ತಿ ಜೀವನದ ಅನುಭವ ಹೊಂದಿದ್ದ ಆಸ್ಟ್ರೇಲಿಯಾದ ಫಿಜಿಯೋ ಥೆರಪಿಸ್ಟ್ ಪ್ಯಾಟ್ರಿಕ್ ಫರ್ಹಾತ್ ಅವರು ಕಳೆದ 2015ರಲ್ಲಿ ಭಾರತ ತಂಡದಲ್ಲಿ ತಮ್ಮ ಸೇವೆ ಆರಂಭಿಸಿದ್ದರು. ಇದೀಗ ಅವರು ತಮ್ಮ ಸ್ವದೇಶಕ್ಕೆ ತೆರಳಲಿದ್ದಾರೆ.

## ಫೈನಲ್ ಫೈಟ್‌ಗೆ ಹಲೆಪ್-ಸೆರೆನಾ





**ಲಂಡನ್:** ವಿಶ್ವ ಮಾಜಿ ಅಗ್ರ ಕ್ರಮಾಂಕದ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ವಿಂಬಲ್ಡನ್ ಚಾಂಪಿಯನ್‌ಶಿಪ್‌ನ ಫೈನಲ್ ತಲುಪಿದ್ದು, ದಾಖಲೆಯ 24ನೇ ಗ್ರ್ಯಾನ್ ಸ್ಲ್ಯಾಮ್ ಗೆಲುವಿಗೆ ಇನ್ನೊಂದೆ ಮೆಟ್ಟಿಲು ಬಾಕಿಯಿದೆ. ಮತ್ತೊಂದು ಸೆಮಿಫೈನಲ್ ಗೆದ್ದಿರುವ ರೋಮೆನಿಯಾದ ಸಿಮೋನಾ ಹಲೆಪ್ ಅವರ ವಿರುದ್ಧ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಕಾದಾಟ ನಡೆಸಲಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ಸೆರೆನಾ ಭರ್ಜರಿ ಪ್ರದರ್ಶನ ನೀಡಿ ಜೆಕ್ ಗಣರಾಜ್ಯದ ಬಾರ್ಬೊರಾ ಸ್ಟ್ರೈಕೋವಾ ವಿರುದ್ಧ 6-1, 6-2 ಅಂತರದಲ್ಲಿ ಮಣಿಸಿ ಫೈನಲ್ ಪ್ರವೇಶ ಮಾಡಿದರು. ಈ ಮೂಲಕ ಸೆರೆನಾ ಅವರು 11ನೇ ಬಾರಿ ಟೂರ್ನಿಯ ಫೈನಲ್ ಗೆ ಪ್ರವೇಶ ಪಡೆದಿದ್ದಾರೆ. ಈ ಹಿಮದೆ ಸೆರೆನಾ 2002, 2003, 2009, 2010, 2012, 2015, 2016ರಲ್ಲಿ ವಿಂಬಲ್ಡನ್ ಚಾಂಪಿಯನ್ ಆಗಿದ್ದರು. ಇನ್ನೊಂದು ಸೆಮಿಫೈನಲ್ಸ್ ಪಂದ್ಯದಲ್ಲಿ ರೋಮೆನಿಯಾದ ಸಿಮೋನಾ ಹಲೆಪ್ 6-1, 6-3 ರಿಂದ ಎಲಿನಾ ಸ್ವಿಟೋಲಿನಾ ವಿರುದ್ಧ ಜಯ ಸಾಧಿಸಿದರು. ಈ ಮೂಲಕ ವಿಂಬಲ್ಡನ್ ಫೈನಲ್ ತಲುಪಿದ ಮೊದಲ ರೋಮೆನಿಯಾ ಆಟಗಾರ್ತಿ ಎಂಬ ಕೀರ್ತಿಗೆ ಭಾಜನರಾದರು.

## ತಾಜಿಕಿಸ್ತಾನಕ್ಕೆ ಸತತ ಎರಡನೇ ಜಯ



**ಅಹಮದಾಬಾದ್:** ಇಲ್ಲಿ ನಡೆದ ಇಂಟರ್ ಕಾಂಟಿನೆಂಟಲ್ ಕಪ್ ಮೂರನೇ ಪಂದ್ಯದಲ್ಲಿ ತಾಜಿಕಿಸ್ತಾನ ತಂಡ ಸಿರಿಯಾ ತಂಡದ ವಿರುದ್ಧ ಗೆಲುವು ಪಡೆದಿದೆ.

ಇಲ್ಲಿನ ಇಕೆಎ ಅರೇನಾದಲ್ಲಿ ನಡೆದ ಇಂಟರ್‌ಕಾಂಟಿನೆಂಟಲ್ ಮೂರನೇ ಪಂದ್ಯದಲ್ಲಿ ಬಾರಟೋವ್ (46ನೇ ನಿ.) ಹಾಗೂ ಕೊಮ್ರೋನ್ (67ನೇ ನಿ.) ಅವರು ಗಳಿಸಿದ ಎರಡು ಗೋಲುಗಳ ನೆರವಿನಿಂದ ತಾಜಿಕಿಸ್ತಾನ 2-0 ಅಂತರದಲ್ಲಿ ಸಿರಿಯಾ ವಿರುದ್ಧ ಗೆಲುವಿನ ನಗೆ ಬೀರಿತು. ಇದರೊಂದಿಗೆ ತಾಜಿಕಿಸ್ತಾನ ಸತತ ಒಟ್ಟು ಎರಡು ಪಂದ್ಯಗಳನ್ನು ತನ್ನದಾಗಿಸಿಕೊಂಡಿತು. ತನ್ನ ಮೊದಲನೇ ಪಂದ್ಯದಲ್ಲಿ ಭಾರತದ ವಿರುದ್ಧ 4-2 ಅಂತರದಲ್ಲಿ ಗೆದ್ದಿತ್ತು. ಮೊದಲ ಅವಧಿಯಲ್ಲಿ ಸಿರಿಯಾಗೆ ಗೋಲು ಗಳಿಸಬಹುದಾದ ಹಲವು ಅವಕಾಶಗಳು ಇದ್ದವು. ಆದರೆ, ಸಿಕ್ಕ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಅವರು ವಿಫಲರಾದರು. ಆದರೆ, ತಾಜಿಕಿಸ್ತಾನ ಗೋಲ್ ಕೀಪರ್ ತಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿಬಾಯಿಸಿದ್ದರು. ಮೊದಲ ಅವಧಿ ಮುಕ್ತಾಯಕ್ಕೆ ಉಭಯ ತಂಡಗಳು ಗೋಲು ರಹಿತವಾಗಿ ವಿಶ್ರಾಂತಿಗೆ ತೆರಳಿದವು.

ಎರಡನೇ ಅವಧಿಯಲ್ಲಿ ಯೋಜನೆಯೊಂದಿಗೆ ಕಣಕ್ಕೆ ಇಳಿದ ತಾಜಿಕಿಸ್ತಾನ ಅತ್ಯುತ್ತಮ ಪ್ರದರ್ಶನ ತೋರಿತು. 46ನೇ ನಿಮಿಷದಲ್ಲಿ 30 ಅಡಿಯಿಂದ ಅಂತರದಿಂದ ಹೊಡೆದ ಚೆಂಡನ್ನು ನೇರವಾಗಿ ಗೋಲು ಪಟ್ಟಿಗೆ ಸೇರಿಸುವಲ್ಲಿ ಬಾರಟೋವ್ ಅವರು ಯಶಸ್ವಿಯಾದರು. ಆ ಮೂಲಕ ತಾಜಿಕಿಸ್ತಾನ ಗೋಲಿನ ಖಾತೆ ತೆರೆಯಿತು.

67ನೇ ನಿಮಿಷದಲ್ಲಿ ಕೊಮ್ರೋನ್ ಅವರು ತಂಡಕ್ಕೆ ಎರಡನೇ ಗೋಲು ತಂದುಕೊಟ್ಟರು. ಇದರೊಂದಿಗೆ ತಾಜಿಕಿಸ್ತಾನ 2-0 ಮುನ್ನಡೆ ಪಡೆಯಿತು. ಅಂತಿಮವಾಗಿ ಪಂದ್ಯದ ನಿಗದಿತ ಅವಧಿ ಮುಕ್ತಾಯಕ್ಕೆ ತಾಜಿಕಿಸ್ತಾನ ಗೆಲುವಿನ ನಗೆ ಬೀರಿತು.

## ಯುಎಸ್ ಓಪನ್: ಭಾರತೀಯರ ಶುಭಾರಂಭ







**ಪುಲ್ಲರ್ಟನ್ (ಅಮೆರಿಕ):** ಗುರುವಾರ ಇಲ್ಲಿ ಶುರುವಾದ ಯುಎಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ನ ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಲಕ್ಷ್ಯ ಸೇನ್ ಅವರು ಹಿರಿಯ ಆಟಗಾರ ಪರುಪಳ್ಳಿ ಕಶ್ಯಪ್ ಅವರನ್ನು ಸೋಲಿಸುವ ಮೂಲಕ ಎರಡನೇ ಸುತ್ತಿಗೆ ಪದಾರ್ಪಣೆ ಮಾಡಿದರು. ಜತೆಗೆ, ಭಾರತದ ಎಚ್.ಎಸ್ ಪ್ರಣಯ್ ಹಾಗೂ ಸೌರಭ್ ವರ್ಮಾ ಅವರು ಎರಡನೇ ಸುತ್ತಿಗೆ ಪ್ರವೇಶಿಸಿದ್ದಾರೆ.

31 ನಿಮಿಷ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ತೋರಿದ ಲಕ್ಷ್ಯ ಸೇನ್ 21-11, 21-18 ನೇರ ಸೆಟ್‌ಗಳಿಂದ ತಮ್ಮ ದೇಶದವರೇ ಆದ ಅನುಭವಿ ಆಟಗಾರ ಪರುಪಳ್ಳಿ ಕಶ್ಯಪ್ ಅವರಿಗೆ ಸೋಲುಣಿಸಿದರು. ಒಂದು ಗಂಟೆ ನಾಲ್ಕು ನಿಮಿಷ ನಡೆದ ಮತ್ತೊಂದು ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಭಾರತದ ಮತ್ತೊಬ್ಬ ಆಟಗಾರ ಸೌರಭ್ ವರ್ಮಾ ಅವರು 21-23, 21-15, 22-20 ಅಂತರದಲ್ಲಿ ಇಂಗ್ಲೆಂಡ್‌ನ ಟಾಬಿ ಪೆಂಟಿ ಅವರನ್ನು ಮಣಿಸಿ ಶುಭಾರಂಭ ಮಾಡಿದರು.

ಮತ್ತೊಂದು ಸಿಂಗಲ್ಸ್ ಹಣಾಹಣಿಯಲ್ಲಿ ಎಚ್.ಎಸ್ ಪ್ರಣಯ್ ಅವರು 21-23, 24-22, 21-18 ಅಂತರದಲ್ಲಿ ಜಪಾನ್‌ನ ಯು ಇಗರ್ಶಿ ವಿರುದ್ಧ ಗೆದ್ದು ಎರಡನೇ ಸುತ್ತಿಗೆ ತಲುಪಿದರು. ಎರಡನೇ ಸುತ್ತಿನ ಪಂದ್ಯದಲ್ಲಿ ಇವರು ಕೊರಿಯಾದ ಹೀ ಕ್ವಾಂಗ್ ಹೀ ವಿರುದ್ಧ ಸೆಣಸಲಿದ್ದಾರೆ.

ಮತ್ತೊಂದು ಪುರುಷರ ಸಿಂಗಲ್ಸ್ ಹಣಾಹಣಿಯಲ್ಲಿ ಭಾರತದ ಜಯರಾಮ್ ಅವರು ಚೈನೀಸ್ ತೈಪೆಯ ವಾಂಗ್ ಟಿಜು ವೀ ವಿರುದ್ಧ 16-21, 21-18, 16-21 ಅಂತರದಲ್ಲಿ ಸೋತು ನಿರಾಸೆ ಅನುಭವಿಸಿದರು.

ಶ್ರೀ ಕೃಷ್ಣ ಪ್ರಿಯಾ ಹಾಗೂ ಅರುಣ ಅವರು ಸೋಲುವ ಮೂಲಕ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯವಾಯಿತು. ಶ್ರೀಕೃಷ್ಣ ಪ್ರಿಯಾ ಅವರು ಕೊರಿಯಾದ ಕಿಮ್ ಯುನ್ ವಿರುದ್ಧ 11-21, 8-21 ಅಂತರದಲ್ಲಿ ಸೋಲು ಅನುಭವಿಸಿದರೆ, ಅರುಣ ಅವರು ಲಿನ್ ಹಸೈಂಗ್ ವಿರುದ್ಧ 17-21, 14-21 ಅಂತರದಲ್ಲಿ ಸೋತು ಟೂರ್ನಿಯ ಅಭಿಯಾನ ಮುಗಿಸಿದರು.

ವಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಕೋನ ತರುಣ್ ಹಾಗೂ ಕೆನಡಾದ ಬಿ.ಆರ್ ಸಂಕೀರ್ತ್ ಜೋಡಿಯು ಕೊರಿಯಾದ ಲೀ ಯಾಂಗ್ ಡೇ ಮತ್ತು ಯೋ ಯಿನ್ ಸಿಯಾಂಗ್ ಜೋಡಿಯ ವಿರುದ್ಧ 11-21, 11-21 ಅಂತರದಲ್ಲಿ ಸೋಲು ಅನುಭವಿಸಿತು.

# ಫೆಡರರ್‌ಗೆ ವಿಂಬಲ್ಡನ್ ಶತಕದ ಗರಿ



**ಲಂಡನ್:** ವಿಶ್ವ ಶ್ರೇಷ್ಠ ಟೆನಿಸ್ ಆಟಗಾರ ರೋಜರ್ ಫೆಡರರ್ ಅವರು ಕೀ ನಿಶಿಕೋರಿ ಅವರ ವಿರುದ್ಧ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿಗೆದ್ದು ವೃತ್ತಿ ಜೀವನದ ವಿಂಬಲ್ಡನ್ ಶತಕ ದಾಖಲಿಸಿದರು. ಜತೆಗೆ ಹುಲ್ಲು ಹಾಸಿನ ಹಾಸಿನ ಅಂಗಳದಲ್ಲಿ 186 ಪಂದ್ಯಗಳ ಜಯದೊಂದಿಗೆ ಜಿಮ್ಮಿ ಕಾನರ್ಸ್ ಅವರ ದಾಖಲೆಯನ್ನು ಮುರಿದರು.

ಬುಧವಾರ ನಡೆದ ವಿಂಬಲ್ಡನ್ ಅಂತಿಮ ಎಂಟರ ಘಟ್ಟದ ಪಂದ್ಯದಲ್ಲಿ ಅದ್ಭುತ ಪ್ರದರ್ಶನ ತೋರಿದ ಸ್ವಿಡ್ಜರ್ಲೆಂಡ್ ನ ರೋಜರ್ ಫೆಡರರ್ ಅವರು 4-6, 6-1, 6-4, 6-4 ಅಂತರದಲ್ಲಿ ಜಪಾನ್‌ನ ಕೀ ನಿಶಿಕೋರಿ ಅವರ ವಿರುದ್ಧ ಜಯ ಸಾಧಿಸಿ ಅಂತಿಮ ನಾಲ್ಕರ ಘಟ್ಟಕ್ಕೆ ತಲುಪಿದರು. ವಿಂಬಲ್ಡನ್ ಚಾಂಪಿಯನ್‌ಶಿಪ್‌ನಲ್ಲಿ 100 ಪಂದ್ಯ ಜಯ ಸಾಧಿಸಿದ ವಿಶ್ವದ ಮೊದಲ ಟೆನಿಸ್ ಆಟಗಾರ ಎಂಬ ವಿಶಿಷ್ಟ ಸಾಧನೆಗೆ ಫೆಡರರ್ ಭಾಜನರಾದರು. ಮೊದಲನೇ ಸೆಟ್‌ಲ್ಲಿ ಮೂರನೇ ಶ್ರೇಯಾಂಕಿತ ಆಟಗಾರ ರೋಜರ್, 8 ನೇ ಸ್ಥಾನದ ಆಟಗಾರನಿಗೆ 4-6 ಅಂತರದಲ್ಲಿ ಮಣಿದರು. ನಂತರ, ಎಚ್ಚೆತ್ತುಕೊಂಡು 20 ಗ್ರ್ಯಾನ್ ಸ್ಲ್ಯಾಮ್ ವಿಜೇತ ಮುಂದಿನ ಮೂರು ಸೆಟ್‌ಗಳನ್ನು ತಮ್ಮದಾಗಿಸಿಕೊಂಡರು. ಅಂತಿಮವಾಗಿ ಉಪಾಂತ್ಯಕ್ಕೆ ಟಿಕೆಟ್ ಪಡೆದರು.

## ಇಂದು ನಡಾಲ್-ಫೆಡರರ್ ಮುಖಾಮುಖಿ

ಇಂದು ರೋಜರ್ ಫೆಡರರ್ ಅಂತಿಮ ನಾಲ್ಕರ ಘಟ್ಟದಲ್ಲಿ ಸ್ಪೇನ್ ನ ರಫೆಲ್ ನಡಾಲ್ ಅವರ ವಿರುದ್ಧ ಪ್ರಶಸ್ತಿ ಸುತ್ತಿಗಾಗಿ ಸೆಣಸಲಿದ್ದಾರೆ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ರಫೆಲ್ ನಡಾಲ್ ಅವರು ಸ್ಯಾಮ್ ಕ್ವೆರ್ರಿ ಅವರ ವಿರುದ್ಧ 7-5, 6-2, 6-2 ಅಂತರದಲ್ಲಿ ಜಯ ಸಾಧಿಸಿದ್ದರು. 2008ರ ಬಳಿಕ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಇದೇ ಮೊದಲ ಬಾರಿ ಫೆಡರರ್ ಹಾಗೂ ನಡಾಲ್ ಮುಖಾಮುಖಿಯಾಗುತ್ತಿದ್ದಾರೆ. 11 ವರ್ಷಗಳ ಬಳಿಕ ಪ್ರಸಕ್ತ ಟೂರ್ನಿಯ ಇವರಿಬ್ಬರ ಮುಖಾಮುಖಿ ಕಾದಾಟ ತೀವ್ರ ಕುತೂಹಲ ಕೆರಳಿಸಿದೆ. ನಡಾಲ್ ಹಾಗೂ ಫೆಡರರ್ ಅವರು ಕಳೆದ ಫ್ರೆಂಚ್ ಓಪನ್ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಿದ್ದರು. ಈ ಪಂದ್ಯದಲ್ಲಿ ನಡಾಲ್ ಗೆದ್ದು ಫೈನಲ್ ಪ್ರವೇಶ ಮಾಡಿದ್ದರು. ಇದೇ ವಿಶ್ವಾಸದಲ್ಲಿ ನಡಾಲ್ ಇಂದು ಕಣಕ್ಕೆ ಇಳಿಯಲ್ಲಿದ್ದಾರೆ. ವಿಶ್ವದ ಶ್ರೇಷ್ಠ ಆಟಗಾರರ ಪಂದ್ಯವನ್ನು ಕಣ್ತುಂಬಿಕೊಳ್ಳಲು ಟೆನಿಸ್ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.



### ಹಸಿರು ಅಂಗಳದ ದಾಖಲೆ

| ಆಟಗಾರ | ಗೆಲುವು |
|---|---|
| ರೋಜರ್ ಫೆಡರರ್ | 186 |
| ಜಿಮ್ಮಿ ಕಾನರ್ಸ್ | 185 |
| ಜಾನ್ ನ್ಯೂಕೊಂಬ್ | 145 |
| ಕೆನ್ ರೋಸ್‌ವಾಲ್ | 141 |
| ಫಿಲ್ ಡೆಂಟ್ | 137 |